ಹೀಗಾಗಿ ಹರಿಕೀರ್ತನೆಗಳ ಹಾಡುವಿಕೆಯನ್ನು ಒಡನೆಯೆ ನಿಲ್ಲಿಸಬೇಕೆಂದು ಆದೇಶ ಹೊರಡಿಸಿದ. ಆದರೆ ಅದು ಕಾರ್ಯಗತವಾಗಲೇ ಇಲ್ಲ. ಆದ್ದರಿಂದ ನಿಮಾಯಿ ಮತ್ತು ಅವನ ಸಂಗಡಿಗರನ್ನು ಬಂಧಿಸಬೇಕೆಂದು ಆರಕ್ಷಕರನ್ನು ಕಳುಹಿಸಿದ. ಆದರೆ ಅವರ ಸುತ್ತಲೂ ಯಾವಾಗಲೂ ಜನರ ದೊಡ್ಡ ಗುಂಪು ಇರುತ್ತಿದ್ದರಿಂದ ಅದೂ ಸಾಧ್ಯವಾಗಲೇ ಇಲ್ಲ. ಇದರಿಂದ ಕೋಪಗೊಂಡ ಕಾಜಿ ತನ್ನ ಕೆಲವು ಆಫ್ಘನ್ ಪಡೆಗಳನ್ನು ವಿಪ್ಲವಕಾರಿ ಜನರ ಮೇಲೆ ನಿರ್ದಯವಾಗಿ ಎರಗಲು ಮತ್ತು ಅವರನ್ನು ಚದುರಿಸಲು ಕಳುಹಿಸಿದ. ಆದರೆ ಕೃಷ್ಣಭಕ್ತಿ ತುಂಬಿದ್ದ ಆ ಜನರ ಹೃದಯಗಳಲ್ಲಿ ಭಯ ಹೊರಟುಹೋಗಿತ್ತು. ನಗರದ ಒಂದು ಭಾಗದಲ್ಲಿ ಅವರ ಮೇಲೆ ಹಲ್ಲೆ ನಡೆದರೆ, ಮತ್ತೊಂದು ಕಡೆ ಅವರೆಲ್ಲರೂ ಕೂಡಿ ಹರಿಕೀರ್ತನೆಯನ್ನು ನಡೆಸುತ್ತಿದ್ದರು. ಹೀಗೆ ಕೀರ್ತನೆ ಸ್ವಲ್ಪ ಕಾಲ ಮುಂದುವರಿದರೂ ಕೆಲ ದಿನಗಳ ನಂತರ ಎಲ್ಲವೂ ಸ್ಥಗಿತಗೊಂಡಿತು.

ಈಗ ಪ್ರಭು ನಿಮಾಯಿಯೆ ಈ ಸವಾಲನ್ನು ಸ್ವೀಕರಿಸಿದನು. ಅವನ ಕರೆಯ ಮೇರೆಗೆ ಜನರೆಲ್ಲ ನೆರೆದರು. ನಿಮಾಯಿಯನ್ನು ಕೇಂದ್ರವಾಗಿರಿಸಿಕೊಂಡು, ಬೃಹತ್ತಾದ ಒಂದು ಸಂಕೀರ್ತನೆಯ ಗುಂಪು ಭಕ್ತಿಯ ಭಾವೋನ್ಮಾದದಲ್ಲಿ ಕಾಜಿಯ ಮನೆಯೆಡೆಗೆ ಧಾವಿಸಿತು. ಅವನೊಡನೆ ಸಂದರ್ಶನಕ್ಕಾಗಿ ಒತ್ತಾಯಿಸಿತು ಕೂಡ. ಕಾಜಿ ಮೊದಮೊದಲು ಅಳುಕಿದನಾದರೂ, ಕಡೆಯಲ್ಲಿ ಹೊರಬಂದು ನಿಮಾಯಿಯ ಮುಂದೆ ನಿಂತ. ಅದೇನಾಯಿತೋ, ಸರ್ವಾಧಿಕಾರಿಯಾದ ಆ ಕಾಜಿಯ ಮನೋಭಾವವೇ ಪರಿವರ್ತನೆಹೊಂದಿತು! ಅವನು ವಿನೀತ ಭಾವದಿಂದ ಮಾತನಾಡಲಾರಂಭಿಸಿದ. ನಿಮಾಯಿ ಪ್ರಭುವನ್ನು 'ಹರಿ ಗೌರ' ಎಂದು ಸಂಬೋಧಿಸಿದ. ತಾನಾಗಿಯೆ ಈ ಕ್ರಮವನ್ನು ಕೈಗೊಳ್ಳಲಿಲ್ಲವೆಂದೂ, ಹಿಂದೂ ಸಮಾಜದ ನೇತಾರರು ಬಯಸಿದ್ದರಿಂದ ಹಾಗೆ ಮಾಡಬೇಕಾಯಿತೆಂದೂ ನಿವೇದಿಸಿದ. ನಂತರ ಹೀಗೆ ನುಡಿದ: "ಇರುವುದು ಒಬ್ಬನೇ ದೇವರು. ಹಿಂದೂಗಳು ಅವನನ್ನು ನಾರಾಯಣ ಎಂದು ಕರೆಯುವರು. ಅವನೇ ನಿನ್ನ ರೂಪದಲ್ಲಿ ಬಂದಿರುವನೆಂದು ಜನರು ಹೇಳುವರು. ಹೌದೇನು? " ನಂತರ ನಿಮಾಯಿ ಪ್ರಭುವು ಕಾಜಿಯತ್ತ ಬೆರಳು ತೋರಿ ಹೇಳಿದನು: "ನೀನು 'ಹರಿ', 'ಕೀರ್ತನೆ' ಮತ್ತು 'ನಾರಾಯಣ' – ಈ ಪವಿತ್ರ ಶಬ್ದಗಳನ್ನು ಉಚ್ಚರಿಸಿರುವೆ. ಅದರಿಂದಾಗಿ ನಿನ್ನ ಪಾಪಗಳೆಲ್ಲವೂ ಕಳೆದುಹೋದವು." ಕಾಜಿಯು ಒಡನೆ ಪರಿವರ್ತಿತನಾದನು. ಅವನ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯಿತು. ಕಾಜಿ ನಿಮಾಯಿಗೆ ಶರಣಾಗತನಾಗಿ ಅಡ್ಡಬಿದ್ದ. ಇನ್ನು ಮುಂದೆ ಹರಿಸಂಕೀರ್ತನೆಯನ್ನು ಯಾರೂ ತಡೆಯಬಾರದೆಂದು ಒಡನೆಯೇ ಆದೇಶವಿತ್ತ.

(ಮುಂದುವರಿಯುವುದು)

## ಪ್ರಹಸನ ಪ್ರಸಂಗ

**ರಾಮು:** ಅಲ್ಲಾ ಕಣೋ! ಇವತ್ತು ಶಾಲೆಯಲ್ಲಿ ಗೋಡೆಯ ಗಡಿಯಾರ ದಿಢೀರನೆ ಬಿದ್ದುಬಿಡ್ತು. ಸದ್ಯ, ಇನ್ನೊಂದು ಕ್ಷಣ ಮುಂಚೆ ಬಿದ್ದಿದ್ದರೆ ಮೇಡಂ ತಲೆಯ ಮೇಲೇ ಬೀಳ್ತಿತ್ತು!

**ಶ್ಯಾಮು:** ಅಯ್ಯೋ! ನಿನಗೆ ಗೊತ್ತಿಲ್ವೇ? ಆ ಗಡಿಯಾರ ಯಾವಾಗಲೂ ನಿಧಾನವಾಗಿ ಚಲಿಸುತ್ತಿತ್ತು!

***

**ಪಾದ್ರಿ:** ಮಗು, ನೀನು ಊಟಮಾಡುವ ಮುಂಚೆ ದೇವರಿಗೆ ಪ್ರಾರ್ಥನೆಯನ್ನು ಮಾಡುತ್ತಿರುವೆ ತಾನೆ?

**ಬಾಲಕ:** ಅದರ ಆವಶ್ಯಕತೆ ಇಲ್ಲ. ನನ್ನ ತಾಯಿ ರುಚಿಯಾಗಿ ಅಡುಗೆ ತಯಾರಿಸುತ್ತಾಳೆ.

***

ಒಂದು ಚಿತ್ರದ ದೃಶ್ಯದಲ್ಲಿ ನಾಯಕನು ಸತ್ತವನಂತೆ ನಟಿಸಬೇಕಿತ್ತು. ಮತ್ತೆ ಮತ್ತೆ ಅದೇ ದೃಶ್ಯವನ್ನು ನಿರ್ಮಾಪಕ ತೆಗೆಯುತ್ತಲೇ ಇದ್ದ. ಕಡೆಗೆ ಬೇಸತ್ತು ನಾಯಕನಿಗೆ ಹೇಳಿದ, 'ನಾಯಕರೆ, ಇದು ಇನ್ನೂ ನಾಟಕೀಯವಾಗಿ ಇರಬೇಕು. ನಿಮ್ಮ ಸಾವಿಗೆ ಜೀವವನ್ನು ತುಂಬಿ!'

***

**ಗಿರಾಕಿ:** ಇದೇನು ಪೂರ್ತಿ ಊಟವೇ? ನಿನ್ನೆಯ ದಿನ ಇದರ ಎರಡರಷ್ಟು ನೀಡಿದ್ದೆಯಲ್ಲ?

**ಮಾಣಿ:** ನಿನ್ನೆ ನೀವು ಎಲ್ಲಿ ಕುಳಿತಿದ್ದಿರಿ?

**ಗಿರಾಕಿ:** ಅಲ್ಲಿ, ಆ ಕಿಟಕಿಯ ಬಳಿ. ಯಾಕೆ?

**ಮಾಣಿ:** ಹಾ! ಹಾಗ್ಹೇಳಿ. ಆ ಕಿಟಕಿಯ ಹೊರಗೆ ಓಡಾಡುವ ಜನ ಹೋಟೆಲಿನ ಬಗ್ಗೆ ಒಳ್ಳೆಯ ಅಭಿಪ್ರಾಯ ಹೊಂದಲಿ, ಗಿರಾಕಿಗಳು ಹೆಚ್ಚಲಿ ಎಂದು ಅಲ್ಲಿ ಕುಳಿತವರಿಗೆ ಮಾತ್ರ ಜಾಸ್ತಿ ನೀಡುತ್ತೇವೆ!

***

**ಮೇಷ್ಟ್ರು:** ರಾಮು, ನಿನ್ನ ಬರವಣಿಗೆ ಬ್ರಹ್ಮಲಿಪಿಯಯ್ಯಾ! ಅದೇನು ಅಧ್ವಾನ! ಸ್ಪಷ್ಟವಾಗಿ, ಸುಂದರವಾಗಿ ಬರೆಯಲು ಅಭ್ಯಾಸ ಮಾಡು.

**ರಾಮು:** ಬೇಡ ಸಾರ್! ಹಾಗೆ ಮಾಡಿದರೆ ನನ್ನ ಕಾಗುಣಿತವೂ ಅಧ್ವಾನವೆಂದು ಗೊತ್ತಾಗಿಬಿಡುತ್ತದೆ!